ಪ್ರಾಚೀನ ಕಟ್ಟಡ, ನಿರ್ಜನ ಪ್ರದೇಶಗಳಲ್ಲಿ ಇದು ವಾಸಿಸುವುದರಿಂದ ಇದಕ್ಕೆ ಪಾಳುಗುಮ್ಮ ಎಂಬ ಹೆಸರು ಬಂದಿದೆ. ಒಂಟಿಯಾಗಿ ಹೊಳೆ- ಕೆರೆಗಳ ಪಕ್ಕದಲ್ಲಿರುವ ದೊಡ್ಡಮರಗಳ ಸೊಪ್ಪಿನ ನಡುವೆ ನಿದ್ರಿಸುವ, ಹೆಚ್ಚು ಮೀನು ತಿನ್ನುವ 'ಮೀನುಗುಮ್ಮ'. ಗರುಡನ ಗಾತ್ರದ ಮೀನುಗುಮ್ಮವನ್ನೇ ಹೋಲುವ ಕಲ್ಲುಬಂಡೆಗಳ ಪಕ್ಕದಲ್ಲಿ ವಾಸಿಸುವ ಕೊಂಬಿನ ಗುಮ್ಮ, ಮೈನಾ ಗಾತ್ರದ ಗುಂಡು ತಲೆಯ ಪುಟ್ಟಗುಮ್ಮ. ಇದನ್ನು ಹಾಲಕ್ಕಿ ಗುಮ್ಮ ಅಂತ ಕರೆಯುವುದಿದೆ. ಇದು ಮರದ ಪೊಟರೆಗಳಲ್ಲಿ ಕುರುಚಲು ಕಾಡುಗಳಲ್ಲಿ ವಾಸಿಸುತ್ತದೆ. ಹಾಲಕ್ಕಿ ಗುಮ್ಮನನ್ನೇ ಹೋಲುವ ಸಾಗುವಾನಿ, ಬಿದಿರು ಕಾಡುಗಳಲ್ಲಿ ವಾಸಿಸುವ ಕೀರಲು ಸ್ವರದಲ್ಲಿ ಕೂಗುವ ಚೀರುಗುಮ್ಮ. ಹೀಗೆ ಬಣ್ಣ, ಸ್ವಭಾವ, ವಾಸಸ್ಥಾನಕ್ಕೆ ಅನುಗುಣವಾಗಿ ಗುಮ್ಮಗಳಿಗೆ ಹೆಸರಿಡಲಾಗಿದೆ. ಭಾರತ, ಪಾಕಿಸ್ತಾನ, ಶ್ರೀಲಂಕಾ, ಬರ್ಮಾ, ಬಾಂಗ್ಲಾ ದೇಶಗಳಲ್ಲಿ ಗುಮ್ಮಗಳು ಹೆಚ್ಚಾಗಿ ಕಂಡು ಬರುತ್ತವೆ. ಗುಮ್ಮಗಳ ಜೀವನಶೈಲಿ, ಆಹಾರ, ಮೈಬಣ್ಣ ಅಲ್ಪಸ್ವಲ್ಪ ವ್ಯತ್ಯಾಸದಿಂದ ಕೂಡಿರುತ್ತದೆ. ಕೆಲವು 'ಗೋವೋ', ಇನ್ನು ಕೆಲವು 'ಊಹೋ', ಮತ್ತೆ ಕೆಲವು 'ಬೋಗೋ' ಎಂದು ಕೂಗಿದರೆ ಹಾಲಕ್ಕಿ ಗುಮ್ಮ ಮಾತ್ರ ಟುಕೂಟುಕೂ ಎಂದು ಕೂಗುತ್ತವೆ. ಮಾನವ ಮತ್ತು ಗುಮ್ಮ ಇವರುಗಳ ನಡುವೆ ವೈರವಿಲ್ಲ. ನಮ್ಮಮ್ಮನಂಥವರಿಗೆ ಸಣ್ಣಪುಟ್ಟ ಅಸಮಾಧಾನ ಇರಬಹುದು.

ಕಾಲ ಬದಲಾಗಿದೆ ಎನ್ನುವುದಕ್ಕಿಂತ ನಮ್ಮ ಮನಸ್ಥಿತಿ ಬದಲಾಗಿದೆ ಎಂದುಕೊಳ್ಳುವುದಾದರೆ ಇವತ್ತಿನ ದಿನಮಾನದಲ್ಲಿ ಅಮ್ಮಂದಿರ ಬಾಯಿಂದ ಗುಮ್ಮ ಎಂಬ ಶಬ್ದವೇ ಹೊರಬರುವುದಿಲ್ಲ. ಬದಲಾಗಿ ಗೊಗ್ಗಯ್ಯ ಬರುತ್ತಾನೆ ಎನ್ನುತ್ತಾರೆ. ಗೂಬೆ ಎನ್ನುವವರು ಸಾಧಾರಣ ಸಂಖ್ಯೆಯಲ್ಲಿದ್ದಾರೆ. ತುಂಟ ಕೃಷ್ಣ ಊಟ ಒಲ್ಲೆ ಎಂದು ಹಟ ಮಾಡುತ್ತಿದ್ದಾಗ ತಾಯಿ ಯಶೋದೆ, ಗುಮ್ಮನ ಕರೆಯುತ್ತೇನೆ ಎಂದಾಗ ಹೆದರಿದ ಪುಟಾಣಿ ಕೃಷ್ಣ, 'ಗುಮ್ಮನಾ ಕರೆಯದಿರೆ ಅಮ್ಮಾ ನೀ ಗುಮ್ಮನ ಕರೆಯದಿರೆ...' ಎನ್ನುತ್ತಾನೆ. ಪುರಂದರದಾಸರು ರಚಿಸಿರುವ ಈ ಭಕ್ತಿಗೀತೆ ಕೇಳುತ್ತಿದ್ದರೆ, ದೇವರೇ ಮಗುವಾಗಿ ತಾಯಿಯ ಬಳಿ ಅತ್ತು ಕರೆಯುವ ಸನ್ನಿವೇಶ ಕಲ್ಪಿಸಿಕೊಂಡು ಕರುಳು ಒಂದು ಕ್ಷಣಕ್ಕಾದರೂ ಚುರಕ್ ಎನ್ನುತ್ತದೆ.

ನಾನಾ ಕಾರಣಗಳಿಂದ ಗುಮ್ಮಗಳ ಸಂತತಿ ಕಡಿಮೆಯಗುತ್ತಿರುವ ಹೊತ್ತಿನಲ್ಲಿ ಅಮ್ಮನ ಮನಸ್ಥಿತಿ ಬದಲಾಗಿದೆ. ಮೊನ್ನೆಮೊನ್ನೆ ಊರಿಗೆ ಹೋದಾಗ, 'ಅಮ್ಮಾ ಗುಮ್ಮನಗೊಳ್ಳದಲ್ಲಿ ಗುಮ್ಮ ಉಂಟೇನಮ್ಮಾ' ಅಂತ ಕೇಳಿದೆ. 'ಅಯ್ಯೋ ಮೊಗಾ. ಎಂತ ಹೇಳದು ಸುಮಾರ್ ಸಮಯ ಆಗಿತ್ತು. ಗುಮ್ಮನ ನೋಡ್ದೆ... ಅದರ ದನಿ ಕೇಳ್ದಲೆ, ಎಲ್ಲಿ ಹೋಯ್ತಪ್ಪಾ ಶಿಕಾರೆರು ಏನಾರ ಹ್ವಡ್ದ್ರಾ. ಮರದುಂದ ಕೆಳಿಕೆನಾರು ಬಿತ್ತಾ? ಇಲ್ಲಾ ಎತ್ಲಗಾರು ದೇಸಾಂತರ ಹೋಯ್ತಾ? ವಯಸ್ಸಾಗಿ ಸತ್ತುಗಿತ್ತು ಹೋಯ್ತಾ? ಬ್ಯಾರೆ ಕಡೆ ಗೂಡ್ಗೀಡು ಕಟ್ಟಿ ಮರಿ ಮಾಡ್ತಾ? ಏನಾಯ್ತಪ್ಪಾ ಅಂತ ಗ್ಯಾನ ಮಾಡ್ತಿದ್ದೆ. ಇಡೀ ತ್ವಾಟ ಗದ್ದಿ ಎಲ್ಲಾ ಹುಡುಕಿದೆ. ಹೊಟ್ಟೆ ಉರಿಯದು. ಇದ್ದುದ್ದು ಒಂದೇ ಒಂದು ಗುಮ್ಮ. ಅದೂ ಇಲ್ಲದಂಗಾತಲ ಅಂತ ಕೊರ್ಗಿದೆ. ಹ್ಯಂಗ ದೇವ್ರ ಸತ್ಯ ಕನ ಬಂದದೆ ಮತ್ತೆ ನಿನ್ನೆ ಕೂಗ್ತುತ್ತು. ಈಗ ಸಮಾಧಾನ ಆಯ್ತು. ಹಳೇ ಗುಮ್ಮಲ್ಲ. ನೀವೆಲ್ಲಾ ಸಣ್ಣ ಮಕ್ಕಳಾಗಿದ್ದಾಗ ಇತ್ತಲ, ಅದಲ್ಲ. ಇದು ಅದರ ಸಂತಾನ್ವಾ ಇಲ್ಲಾ ಹೊಸ ಗುಮ್ಮನಾ ಗೊತ್ತಿಲ್ಲ. ಅಂತೂ ಇಂತು ಗುಮ್ಮ ಉಂಟೇ ಉಂಟುಕನ' ಎಂದಿತು ಅಮ್ಮ.

ಅಮ್ಮನ ಮಾತು ಕೇಳಿ ನನಗೆ ಆಶ್ಚರ್ಯವಾಯಿತು. 'ಅಲ್ಲಮ್ಮಾ ನಿನಗೆ ಗುಮ್ಮನನ್ನ ಕಂಡ್ರೆ ಆಗ್ತಿರ್ಲಿಲ್ಲ ಅಲ್ವಾ' ಅಂದೆ. 'ಅವತ್ತಿನ ಕಾಲ ಒಂಟಿ ಮನೆ ಸುತ್ತ ಮುತ್ತ ಕಾಡು. ನೀವೆಲ್ಲ ಸಣ್ಣ ಮಕ್ಕಳು. ಏನೋ ಒನ್ತರಾ ಹೆದರಿಕೆ. ಅವಾಗಿನ ಮನಸ್ಸೆ ಬೇರೆ ಈಗಿನ ಮನಸೇ ಬೇರೆ. ಅಪಶಕುನ ಅಂತ ತಿಳಿದಿದ್ದೆ ಅವತ್ತಿನ ಕಾಲಕ್ಕೆ. ಪಾಪ ಅದು ನಮ್ಮಂಗೆ ಒಂದು ಜೀವ ಅಲೇನಾ? ಅದುಕು ನಮ್ಮಂಗೆಯ, ಬಂದು ಬಳಗ ಉಂಟಲ, ಹಂಗಾಗಿ ನಾವು ಮಾತಾಡ್ದಂಗೆ ತಾನೆ ಅವು ಕೂಗದು? ರಾತ್ರಿ ಹಗಲು ಒಂದೇ ಸಮ ಕೂಗ್ಲಿ ಬುಡು. ನಂಗೇನು ಬೇಜಾರಿಲ್ಲ. ತ್ವಾಟದಗೆ ಗುಮ್ಮ ಇದ್ದರೆ ಸಾಕು. ಚಂದ ಕನ. ಇನ್ನೂ ಹತ್ತು ಮರಿ ಹಾಕ್ಲಿ ತಗಾ ನಮ್ಮಪ್ಪನ ಮನಿ ಗಂಟೆನೂ ಹೋಗಕ್ಲ. ಈ ಭೂಮಿ ನಮಗ್ಯಂಗೋ ಹಂಗೆ ಅವುಕುವ' ಅಮ್ಮ ಮಾತಾಡುತ್ತಲೇ ಇದ್ದಾಗ, ನಾನು ಸುಮ್ಮನೆ ಕುಳಿತು ಅಮ್ಮನನ್ನೇ ನೋಡುತ್ತಿದ್ದೆ. ●